ವಗಾಡುತ್ತಿದ್ದಾರೆ ಅದನ್ನು ಮತ್ತು ಗೋಮಾಳ ಜಮೀನನ್ನು ಮೈನರ್ ಫಾರೆಸ್ಟ್ ಎಂದು ಮಾಡಲಾಗಿದೆ. ಅದು ಲಕ್ಷಾಂತರ ಎಕರೆ ಇದೆ. That figure I do not have. If the hon'ble Member desires, I will furnish. ಮತ್ತೆ ಬಗರ್ ಹುಕುಮ್ ಸಾಗುವಳಿ ಏನು ಸಿ.ಎಂಡ್ ಡಿ. ಲ್ಯಾಂಡ್‌ನಲ್ಲಿ ಹಾಗೂ ಇತರ ಜಾಗದಲ್ಲಿ ಮಾಡುತ್ತಿದ್ದರು ಅದರಲ್ಲಿ ೧೯೭೮ಕ್ಕಿಂತ ಮೊದಲಂ ಏನು ಸಾಗುವಳಿ ಮಾಡುತ್ತಿದ್ದವರು, ಅವರಿಗೆಲ್ಲಾ ನಾವು ಪ್ರೊಟಕ್ಷನ್ ಕೊಟ್ಟಿದ್ದೇವೆ. We have given protection to them from eviction and harassment.

ಉದ್ಯೋಗ ವಿನಿಮಯ ಕೇಂದ್ರ

೧೧೨೧ ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿಯಾದವರ ಉದ್ಯೋಗಾರ್ಥಿಗಳ ಸಂಖ್ಯೆ ಎಷ್ಟು? ಹಾಗೂ ನೋಂದಾಯಿಸಿದ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿದೆ? (ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳ ವಿವರ ಪ್ರತ್ಯೇಕವಾಗಿ ನೀಡುವುದು)

ಆ) ಧಾರವಾಡ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಈವರೆವಿಗೆ ನೋಂದಣಿಯಾದವರ ಸಂಖ್ಯೆ ಎಷ್ಟು ಹಾಗೂ ನೋಂದಾಯಿಸಿದ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿದೆ? (ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳ ವಿವರ ಪ್ರತ್ಯೇಕವಾಗಿ ಒದಗಿಸುವುದು).

ಇ) ಉದ್ಯೋಗ ದೊರಕಿಸಿಕೊಂಡವರು ತಮ್ಮ ಹೆಸರುಗಳ ನೋಂದಣಿಯನ್ನು ವಜಾ ಮಾಡಿಸಿಕೊಳ್ಳದೆ ಇರುವುದು ಹಾಗೂ ಇದರಿಂದ ಇತರ ಉದ್ಯೋಗಾರ್ಥಿಗಳಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಅನಾನುಕೂಲ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಸ್.ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ದಿನಾಂಕ ೩೧-೧೨-೧೯೮೭ ರಂದು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಒಟ್ಟು ೧೦,೦೬,೨೫೮ ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದು ಇವರುಗಳ ಪೈಕಿ ೮,೧೭,೯೮೦ ಪುರುಷರು ಮತ್ತು ೧,೮೯,೨೬೮ ಮಹಿಳಾ ಉದ್ಯೋಗಾರ್ಥಿಗಳಾಗಿರುತ್ತಾರೆ.

೧೯೮೭ನೇ ಸಾಲಿನಲ್ಲಿ ೭,೭೭೧ ಪುರುಷರು ಮತ್ತು ೧,೦೬೦ ಮಹಿಳೆಯರು ಸೇರಿದಂತೆ ಒಟ್ಟು ೮,೮೨೧ ಅಭ್ಯರ್ಥಿಗಳಿಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಉದ್ಯೋಗಾವಕಾಶ ದೊರಕಿಸಿಕೊಡಲಾಗಿದೆ.

ಆ) ದಿನಾಂಕ ೩೧-೧೨-೧೯೮೭ ರಂದು ಧಾರವಾಡ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ೫೫,೭೬೫ ಪುರುಷರು ಮತ್ತು ೮,೮೬೧ ಮಹಿಳೆಯರು ಸೇರಿ ಒಟ್ಟು ೬೪,೭೨೬ ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ನೋಂದಾಯಿಸಿಕೊಂಡಿದ್ದ ಅಭ್ಯರ್ಥಿಗಳ ಪೈಕಿ ೧೯೮೭ನೇ ಸಾಲಿನಲ್ಲಿ ಒಟ್ಟು ೫೭೭ ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸಿಕೊಡಲಾಗಿದೆ. ಉದ್ಯೋಗ ಪಡೆದವರ ಪೈಕಿ ೫೦೯ ಪುರುಷರು ಮತ್ತು ೬೮ ಮಹಿಳೆಯರು ಆಗಿರುತ್ತಾರೆ.

ಇ) ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತೆ.

ಈ) ಉದ್ಯೋಗ ದೊರಕಿಸಿಕೊಂಡವರು ತಮ್ಮ ಹೆಸರುಗಳ ನೋಂದಣಿಯನ್ನು ವಜಾ ಮಾಡಿಸಿಕೊಳ್ಳದೆ ಇರುವುದರಿಂದ ಇತರ ಉದ್ಯೋಗಾರ್ಥಿಗಳಿಗೆ ಆಗುವ ಅನಾನುಕೂಲಗಳನ್ನು ನಿವಾರಿಸುವ ಸಲುವಾಗಿ ಈ ಕೆಳಕಂಡ ಕ್ರಮ ತೆಗೆದುಕೊಳ್ಳಲಾಗಿದೆ.—

೧) ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿತ ಅಭ್ಯರ್ಥಿಗಳಿಗೆ ನೀಡುವ ನೋಂದಣಿ ಗುರುತಿನ ಚೀಟಿಯಲ್ಲಿ ಅಭ್ಯರ್ಥಿಗಳು ಉದ್ಯೋಗ ಪಡೆದ ನಂತರ "ತಮಗೆ ಉದ್ಯೋಗ ವಿನಿಮಯ ಕಚೇರಿ ಮುಖಾಂತರ ಸ್ವ ಪ್ರಯತ್ನದಿಂದ ಕೆಲಸ ದೊರಕಿದ್ದು, ಇನ್ನು ಮುಂದೆ ಉದ್ಯೋಗ ಪಡೆಯುವಲ್ಲಿ ನೆರವು ಬೇಕಾಗಿಲ್ಲ" ಎಂದು ತಿಳಿಸಲು ಸೂಚಿಸಲಾಗಿದೆ.

೨) ಉದ್ಯೋಗ ವಿನಿಮಯ ಕೇಂದ್ರಗಳಿಂದ ಪುರಸ್ಕರಿಸಲ್ಪಟ್ಟ ಅಭ್ಯರ್ಥಿಗಳಿಂ ಆಯ್ಕೆಯಾದ ಹದಿನೈದು ದಿನಗಳೊಳಗೆ ಆಯ್ಕೆಯಾದ ಅಭ್ಯರ್ಥಿಗಳ ವಿವರಗಳನ್ನು ಸಂಬಂಧಪಟ್ಟ ಉದ್ಯೋಗ ವಿನಿಮಯ ಕಚೇರಿಗಳಿಗೆ ಕಡ್ಡಾಯವಾಗಿ ತಿಳಿಸಬೇಕೆಂದು ಸರ್ಕಾರವು ನಿಯೋಜಕರಿಗೆ ಆದೇಶ ನೀಡಿರುತ್ತೆ.

ಚುಕ್ಕೆ ಪ್ರಶ್ನೆ ೧೧೨೧

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಈಗ ಉದ್ಯೋಗಾರ್ಥಿಗಳಿಂ ಸ್ವತಃ ಹೋಗಿ ಒತ್ತಾಯ ಮಾಡಿದಾಗ, ಇಂತಹ ಜಾಗ ಖಾಲಿ ಇದೆ ಎಂದು ಉದ್ಯೋಗ ವಿನಿಮಯ ಕೇಂದ್ರದವರು ಹೆಸರನ್ನು ಕಳುಹಿಸುತ್ತಾರೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಇವತ್ತಿ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಯಾವುದೇ ನಿಯಮವನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಾ ಇಲ್ಲ. ತಾವು ಕಟ್ಟುನಿಟ್ಟಾಗಿ ಆದನ್ನು ಪಾಲನೆಗೆ ತರಬೇಕು. ಮತ್ತೆ ಈ ಪ್ರಶ್ನೆಗೆ ಉತ್ತರವಾಗಿ ಕೆಳಕಂಡ ಕ್ರಮಗಳು ಎಂದು ಏನು ಹೇಳಿದ್ದೀರಿ ಈ ಕ್ರಮಗಳು ಯಾವ ವರ್ಷದಿಂದ ಜಾರಿಗೆ ಬಂದಿವೆ ? ಈ ಕ್ರಮಗಳಿಲ್ಲಾ ಪರಿಣಾಮಕಾರಿ ಫಲಿತವನ್ನು ನೀಡಿದೆಯೇ ? ಈ ". ನಿಯೋಜಕರು " ಎಂದರೆ ಯಾರು ? ಅಭ್ಯರ್ಥಿ ಎಲ್ಲಿ ಕೆಲಸಕ್ಕೆ ಸೇರಿದ್ದಾನೆ, ಅಲ್ಲಿಯ ಸಂಬಂಧಪಟ್ಟ ಅಧಿಕಾರಿಯಿಂದ ಉದ್ಯೋಗ ವಿನಿಮಯ ಕೇಂದ್ರಕ್ಕೆ ಆತನಿಗೆ ಕೆಲಸಕ್ಕೆ ಸೇರಿಸಿಕೊಂಡ ಬಗ್ಗೆ ತಿಳಿಸಿದ ಮೇಲೆ ಉದ್ಯೋಗ ವಿನಿಮಯ ಕಛೇರಿಯಲ್ಲಿ ಆತನ ಹೆಸರನ್ನು ತೆಗೆದುಹಾಕಬೇಕಾಗುತ್ತದೆ. ಈ ರೀತಿ ಕ್ರಮ ತೆಗೆದುಕೊಂಡಿರುವ ಬಗ್ಗೆ ಅಂಕಿ ಅಂಶಗಳನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಮತ್ತೆ ಪ್ರತಿಯೊಂದು ಇಲಾಖೆಗಳಿಗೂ ತಮ್ಮ ಸುತ್ತೋಲೆಯನ್ನು ಕಳುಹಿಸಿದ್ದೀರಾ ?

ಶ್ರೀ ಎಸ್. ಕೆ. ಕಾಂತ.—ಸಿ-ಲ್-ರ್ಗಿಸಿರ ಈ ಒಂದು ಆದೇಶದ ಸುತ್ತೋಲೆಯನ್ನು ಎಲ್ಲಾ ಸರ್ಕಾರಿ ಉದ್ಯಮಗಳಿಗೂ, ಕೇಂದ್ರ ಸರ್ಕಾರದ ಅಡಿಯಲ್ಲಿ ನಡೆಯತಕ್ಕ ಉದ್ಯಮಗಳಿಗೂ ಕೊಟ್ಟಿದ್ದೇವೆ. ಆದರೆ ಈವರೆವಿಗೂ ಯಾವುದೇ ಮಾಹಿತಿ ನಮಗೆ ದೊರಕಿಲ್ಲ. ಈಗ ಅಂತಹ ಯಾವುದೇ ಹುದ್ದೆ ಭರ್ತಿಯಾಗುತ್ತಿಲ್ಲ. ವೇಕೆನ್ಸಿ ಇಲ್ಲವೆಂದು ನನಗನ್ನಿಸುತ್ತದೆ ಏಕೆಂದರೆ ಪವರ್ ಕಟ್ ಇದೆ. ಇದರ ಜೊತೆಗೆ ಇನ್ನೂ ಬೇರೆ ಕಾರಣಗಳು ಇವೆ. ಕೇಂದ್ರ ಸರ್ಕಾರದ ಉದ್ದಿಮೆಗಳಲ್ಲಾಗಲಿ ಅಥವಾ ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಾಗಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಆದ್ದರಿಂದ ಆ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಒಂದು ನೀತಿ ಏನು ಇದೆ ಎಂದರೆ, ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಿ ಖಾಲಿಯಾಗಬಹುದಾದ ಹುದ್ದೆಗಳಿಗೆ ಭರ್ತಿ ಮಾಡುವಂತಹ ಉದ್ದೇಶಕ್ಕಾಗಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜನ್ನು ನಡೆಸುತ್ತಿದ್ದೇವೆಯೇ ಹೊರತು ಬೇರೆ ಯಾವುದೇ ವಿಷಯಕ್ಕೆಲ್ಲ ಎನ್ನ ತಕ್ಕ ಮಾತನ್ನು ಹೇಳುತ್ತೇನೆ.

ಶ್ರೀ ಜ್ಞಾನದೇವ ಎಸ್. ದೊಡ್ಡ ಮೇಟಿ.—ನಾನು ಕೇಳಿದ್ದು ಏನೆಂದರೆ, ಇಲ್ಲಿ ಜಾರಿಗೆ ತಂದಿದ್ದೇವೆ ಎಂಬುದಾಗಿ ಏನು ಸೂಚನೆ ಕೊಟ್ಟಿದ್ದೀರಿ, ಅದು ಪರಿಣಾಮಕಾರಿಯಾಗಿ ಜಾರಿಗೆ ಬಂದಿದೆಯೋ ಹೇಗೆ ಎಂದು ? ಎಲ್ಲಿ ಕೆಲಸಕ್ಕೆ ಸೇರಿರುತ್ತಾರೆ, ಆ ಸಂಸ್ಥೆಯಲ್ಲಿರತಕ್ಕ ಅಧಿಕಾರಿಗಳು, ಉದ್ಯೋಗ ವಿನಿಮಯ ಕೇಂದ್ರಕ್ಕೆ ಇಂತಹವರು ಕೆಲಸಕ್ಕೆ ಸೇರಿದ್ದಾರೆ ಎಂದು ಹೇಳುವಂತಹ ಪತ್ರಗಳು ಎಷ್ಟು ಬಂದಿವೆ. ಇದರಿಂದಾಗಿ ಪ್ರತಿಯೊಂದು ಉದ್ಯೋಗ ವಿನಿಮಯ ಕೇಂದ್ರಗಳಲ್ಲೂ ಎಷ್ಟೆಷ್ಟು ಹೆಸರುಗಳನ್ನು ಕಡಿಮೆ ಮಾಡಿದ್ದೀರೆಂಬುದರ ಬಗ್ಗೆ ಅಂಕಿ ಸಂಖ್ಯೆಗಳನ್ನೂ ಕೂಡ ಇಲ್ಲಿ ಕೊಟ್ಟಿಲ್ಲ. ಆದರ ವಿವರಗಳನ್ನು ತಾವು ಕೊಡಬೇಕು.

ಶ್ರೀ ಎಸ್. ಕೆ. ಕಾಂತ,—ಸಾರ್ವಜನಿಕರಿಗೆ ನಿಷ್ಠೆಯಿಂದ ಸೇವೆಯನ್ನು ಒದಗಿಸುವ ಉದ್ದೇಶದಿಂದ ಅಭ್ಯರ್ಥಿಗಳನ್ನು ಗಣಕ ಯಂತ್ರದ ಮೂಲಕ ಅವರ ಪಟ್ಟಿಗಳನ್ನು ತಯಾರು ಮಾಡಲಾಗುತ್ತಿದೆ. ಆ ಒಂದು ಪಟ್ಟಿಯು ಸೀನಿಯಾರಿಟಿ ಆಧಾರದ ಮೇಲೆ ಕೇಂದ್ರ ಸರ್ಕಾರದ ಉದ್ದಿಮೆಗಳಲ್ಲಿ 'ಡಿ' ಗ್ರೂಪ್ ನೌಕರಿಗೆ ಕೆಲಸಕ್ಕೆ ತೆಗೆದುಕೊಳ್ಳತಕ್ಕಂತಹ ವ್ಯವಸ್ಥೆ ಇದೆ. ಆದರೆ ರಾಜ್ಯ ಸರ್ಕಾರದ ಉದ್ದಿಮೆಗಳಲ್ಲಿ ಈ ಪರಿಸ್ಥಿತಿ ಇರಲಿಲ್ಲ. ಅದಕ್ಕೋಸ್ಕರ ಆ ಒಂದು ಆದೇಶವನ್ನು ಹೊರಡಿಸಲಾಗಿದೆ. ಈಗ ಅಂತಹ ಯಾವುದೇ ಹುದ್ದೆಗಳು ಭರ್ತಿಯಾಗುತ್ತಿಲ್ಲ. ಭರ್ತಿಯಾದಾಗ ಆ ಒಂದು ಪಟ್ಟಿ ಬರಬಹುದು. ಮೊನ್ನೆ ಅಂದರೆ ಸಿ-ಲ್-ರ್ಗಿಸಿರಂದು ಈ ಆದೇಶವನ್ನು ಹೊರಡಿಸಲಾಗಿದೆ. ಅಂತಹ ಯಾವುದೇ ಹುದ್ದೆಗಳು

ಭರ್ತಿಯಾಗದ ಕಾರಣ ಯಾರ್ಯಾರು ಕೆಲಸಕ್ಕೆ ಸೇರಿದ್ದಾರೆ ಎನ್ನುತಕ್ಕ ಪಟ್ಟಿ ಇದುವರೆವಿಗೂ ನಮ್ಮ ಪತ್ತಿರ ಬಂದಿಲ್ಲ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು. ಕೂಡ್ರಿ. ನೀವು ಸಿನಿಯರ್ ಮೆಂಬರ್ ಇದ್ದೀರಿ. ಎಷ್ಟು ಸಲ ಕೇಳುವುದು. ಹೀಗೆ ಮಾಡಿದರೆ ಹೇಗೆ ? ಕೂಡ್ರಿ.

ಶ್ರೀ ಬಿ ಬಸವಲಿಂಗಪ್ಪ.—ಈಗ ಏನು ಮಾತನಾಡಿದಿರಿ ಎಂಬುದು ತಮಗೇ ಅರ್ಥವಾಗಿದೆ. ಸಿನಿಯರ್ ಮೆಂಬರ್ ಇದ್ದೀರಿ ಎಂಬುದಾಗಿ ಹೇಳಿದಿರಿ. ಇದ್ದೇವೆ. ಇಲ್ಲವೆಂದು ಹೇಳುವುದ ಕ್ಕಾಗುತ್ತದೆಯೇ ? ಅತಿ ಪ್ರಾಮುಖ್ಯವಾದ ಪ್ರಶ್ನೆಯಾದ್ದರಿಂದ ಹೆಚ್ಚು ಉಪ ಪ್ರಶ್ನೆಗಳನ್ನು ಕೇಳುತ್ತಾರೆ. ಅದಕ್ಕೆ ಈ ರೀತಿ ಹೇಳಿದರೆ ಹೇಗೆ ? Why are you telling us ? It is an insult. It is not a compliment. We know that. I am sorry.

ಅಧ್ಯಕ್ಷರು.—ಸಮಯದ ಪ್ರಜ್ಞೆ ಎಲ್ಲರಿಗೂ ಇರಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಸಮಯದ ಪ್ರಜ್ಞೆ ಇರಬೇಕು ಎಂಬುದು ಎಲ್ಲರಿಗೂ ಗೊತ್ತಿದೆ.

ಅಧ್ಯಕ್ಷರು.—೩ ಪ್ರಶ್ನೆಗಳು ಮಾತ್ರ ಮುಗಿದಿವೆ. ಟೈಮ್ ಎಷ್ಟಾಗಿದೆ ಎಂಬುದನ್ನು ನೋಡಿ ? ನಾನು ಏಕೆ ಹೇಳುತ್ತಿದ್ದೇನೆಂದರೆ, ಒಂದೇ ಪ್ರಶ್ನೆಗೆ ಹೆಚ್ಚು ಸಮಯವನ್ನು ಕೊಟ್ಟರೆ ಎಲ್ಲ ಪ್ರಶ್ನೆಗಳನ್ನು ಪ್ರಶ್ನೋತ್ತರ ವೇಳೆಯಲ್ಲಿ ಮುಗಿಸುವುದಕ್ಕಾಗುವುದಿಲ್ಲ. ಪ್ರಶ್ನೆ ಮುಖ್ಯವಾದುದಾಗಿರುವುದರಿಂದ ಅವರಿಗೆ ಇನ್ನೊಮ್ಮೆ ಅವಕಾಶವನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಸೀನಿಯರ್ ಮೆಂಬರ್ ಇದ್ದೀರಿ ಅಂತ ಏಕೆ ಹೇಳುತ್ತಿದ್ದೀರಿ ?

ಅಧ್ಯಕ್ಷರು.—ಹೇಳಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಆ ರೀತಿ ಹೇಳುವುದು ಒಳ್ಳೆಯದಲ್ಲ. Please don't talk like this. I am so sorry. Please don't talk like this.

ಅಧ್ಯಕ್ಷರು.—ಅರ್ಧ ಗಂಟೆಯಾಗಿದೆ. ೩ ಪ್ರಶ್ನೆಗಳು ಮುಗಿದಿಲ್ಲ.

ಶ್ರೀ ಬಿ ಬಸವಲಿಂಗಪ್ಪ.—ನಿಮ್ಮ ಕಷ್ಟ ನಿಮಗೆ. ನಮ್ಮ ಕಷ್ಟ ನಮಗೆ. ಸುಮ್ಮನೆ ಅಲ್ಲಿ ಕುಳಿತುಕೊಂಡು ಮಾತನಾಡಿದರೆ ಹೇಗೆ ?

ಅಧ್ಯಕ್ಷರು.—ಟೈಮ್ ಹರಣ ಮಾಡುವುದಾದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಪ್ರಶ್ನೆ ಎಲ್ಲರಿಗೂ ಸಂಬಂಧಪಟ್ಟದ್ದು ಆಗಿರುವುದರಿಂದ ನಾನು ಕೇಳುತ್ತಿದ್ದೇನೆ ಉದ್ಯೋಗ ವಿನಿಮಯ ಕೇಂದ್ರದಲ್ಲಿ ರಿಜಿಸ್ಟರ್ ಮಾಡಿಂವಾಗ ಎಲ್ಲರೂ ರಿಜಿಸ್ಟರ್ ಮಾಡಿಸುತ್ತಾರೆ. ಆದರೆ ಸಂದರ್ಶನಕ್ಕೆ ಕಳುಹಿಸುವಾಗ ವಿನಾಗುತ್ತದೆಂದರೆ, ಅನೇಕ ಅಧಿಕಾರಿಗಳು, ಹಾಗೂ ಕ್ಲರ್ಕ್‌ಗಳು ನಿಯಮಗಳನ್ನು ದುರುಪಯೋಗ ಮಾಡುತ್ತಿದ್ದಾರೆ. ಸಿನಿಯಾರಿಟಿ ಇದ್ದರೂ ಕೂಡ ಅವರ ಹೆಸರನ್ನು ಸ್ಕಾಪ್ಸರ್ ಮಾಡದೆ ಜೂನಿಯರ್ ಇದ್ದಂತಹವರನ್ನು ಸ್ಕಾಪ್ಸರ್ ಮಾಡುತ್ತಾರೆ. ಲಂಚ ತೆಗೆದುಕೊಂಡು ಕಳುಹಿಸಬಹುದು. ಇಲ್ಲ ಇನ್‌ಫ್ಲುಯನ್ಸ್‌ನಿಂದ ಕಳುಹಿಸುತ್ತಾರೆ. ಇದನ್ನು ತಪ್ಪಿಸುವುದಕ್ಕೋಸ್ಕರ ಕಂಪ್ಯೂಟರ್ ಸಿಸ್ಟಂ ಜಾರಿಗೆ ತರಬೇಕು. ಎಲ್ಲಾ ಜಿಲ್ಲಾ ಎಂಪ್ಲಾಮೆಂಟ್ ಎಕ್ಸ್‌ಚೇಂಜ್ ಅಂದರೆ ಒಟ್ಟು ೨೧–೨೨ ಆಗಬಹುದು. ಎಲ್ಲಾ ಜಿಲ್ಲಾ ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜ್‌ನಲ್ಲೂ ಕಂಪ್ಯೂಟರ್ ಸಿಸ್ಟಂನ್ನು ಜಾರಿಗೆ ತಂದು ಲಂಚ ಹಾಗೂ ಇನ್‌ಫ್ಲುಯನ್ಸ್ ಏನು ಇದೆ ಅದನ್ನು ತಪ್ಪಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

೯-೩೦ ಎ.ಎಂ.

ವಿಡಿಯೊದಾಗಿ, ರೋಸ್ಟರ್ ಸಿಸ್ಟಮ್ ಪ್ರಕಾರ ಇಂಟರ್‌ವ್ಯೂ ಕಳುಹಿಸಬೇಕೆಂದು ಇರುತ್ತದೆ. ಕಛೇರಿಯಲ್ಲಿ ಕ್ಯಾಂಡಿಡೇಟ್ಸ್ ಇದ್ದರೂ ಕೂಡಾ ಇಲ್ಲ ಎಂದು ಸರ್ಟಿಫಿಕೇಟ್ ಕೊಡುತ್ತಾರೆ. ಇದಕ್ಕೆ ಕಾರಣ, ಇಲ್ಲಿ ಇಲ್ಲ ಎಂದು ಸರ್ಟಿಫಿಕೇಟ್ ತೆಗೆದುಕೊಂಡು ಬೇರೆ ತಮಗೆ ಬೇಕಾದವರನ್ನು ಅಲ್ಲಿ ಆ ಜನ

ಸೇರಿಸಿಕೊಳ್ಳುತ್ತಾರೆ. ಕೆಲವು ಕೈಗಾರಿಕೆಗಳಲ್ಲಿ, ಪಬ್ಲಿಕ್ ಸೆಕ್ಟಾರ್‌ಗಳಲ್ಲಿ, ಕಾರ್ಪೊರೇಷನ್ ಹಾಗೂ ಬೋರ್ಡ್‌ಗಳಲ್ಲಿ ಇಂತಹ ಕೆಲಸ ನಡೆಯುತ್ತಿದೆ. ಆದ್ದರಿಂದ ಪರಿಶಿಷ್ಟ ಜಾತಿ ಹಾಗೂ ಪಂಗಡದವರಿಗೆ ಸಪರೇಟ್ ಪಟ್ಟಿ ಮಾಡಿ, ಅದನ್ನು ಕಂಪ್ಯೂಟರ್‌ಗೆ ಅಳವಡಿಸಿ ಕೆಲಸ ಕೊಡುವ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಎಸ್. ಕೆ. ಕಾಂತ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕದ್ದು ಅತಿ ಉತ್ತಮವಾದ ಪ್ರಶ್ನೆ. ನಾವು ಈಗಾಗಲೇ ಏಳು ಸೆಂಟರ್‌ಗಳಲ್ಲಿ ಕಂಪ್ಯೂಟರೀಕರಣ ಮಾಡಿದ್ದೇವೆ. ಕೆಲಸ ಪ್ರಾರಂಭಿಸಿದ್ದೇವೆ. ಹಂತಹಂತವಾಗಿ ಎಲ್ಲಾ ಸೆಂಟರ್‌ಗಳಲ್ಲಿ ಈ ಬಂದು ಕಂಪ್ಯೂಟರ್ ಸಿಸ್ಟಮ್ ಉಪಯೋಗ ಮಾಡಿದರೆ ಇಂತಹ ಬಂದು ಅವ್ಯವಸ್ಥೆ ತಪ್ಪುತ್ತದೆ. ಈ ರೋಸ್ಟರ್ ಸಿಸ್ಟಮ್‌ನಲ್ಲಿ ಕೆಲವು ಎಕ್ಸ್‌ಟೇಂಜ್‌ನಿಂದ.....

ಶ್ರೀ ಬಿ. ಬಸವಲಿಂಗಪ್ಪ —ನಿಕಿಷ್ಟು ವಿನಯಪೂರ್ವಕವಾಗಿ ಮಾತನಾಡುತ್ತೀರಿ ?

ಶ್ರೀ ಎಸ್. ಕೆ. ಕಾಂತ.—ನನ್ನ ಧಾಟಿಯೇ ಹಾಗೆ. ರೋಸ್ಟರ್ ಸಿಸ್ಟಮ್ ಪ್ರಕಾರ ಮಾಡದೇ ಇರತಕ್ಕದ್ದರ ಬಗ್ಗೆ ಎಷ್ಟೋ ಕಡೆಯಿಂದ ಇಂತಹ ಬಂದು ವಾದ ಮತ್ತು ವಿವಾದಗಳು ಬಂದಿವೆ. ಆದಕ್ಕೋಸ್ಕರ ಅಂತಹ ಪಟ್ಟಿಯನ್ನು ಮಾಡಬೇಕೆಂದು ಸೂಚನೆ ಕೂಡಾ ಕೊಟ್ಟಿದ್ದಾರೆ. ಇದನ್ನೆಲ್ಲಾ ಗಮನದಲ್ಲಿ ಇಟ್ಟುಕೊಂಡು ಅಂತಹ ಬಂದು ಪಟ್ಟಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಸ್ಟೈಫೆಂಡರಿ ಪದವೀಧರರ ಜೇಷ್ಠತಾ ಪಟ್ಟಿ.

೧೦೪೩. ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ಟೈಫೆಂಡರಿ ಪದವೀಧರರನ್ನು ಸರಕಾರಿ ಸೇವೆಯಲ್ಲಿ ನೇಮಕಾತಿ ಮಾಡಿಕೊಳ್ಳುವುದರ ಸಲುವಾಗಿ ಅವರ ಜೇಷ್ಠತಾ ಯಾದಿಯನ್ನು ಮಾಡಲಾಗಿದೆಯೆ?

ಆ) ಕರ್ನಾಟಕ ರಾಜ್ಯ ಪತ್ರ ದಿನಾಂಕ ೫-೬-೧೯೮೭ರಲ್ಲಿ ಅಧಿಕೃತವಾಗಿ ಪ್ರಕಟಿಸಲಾದ ನಂ. ಡಿಟಿಓಆರ್ ೪೮ ಎಸ್‌ಎಸ್‌ಸಿ ೮೬, ದಿನಾಂಕ ೪-೬-೧೯೮೭ರ ಪ್ರಕಾರ ಆರು ತಿಂಗಳಾದರೂ ಈ ಯಾದಿ ಮಾಡದೇ ಇರುವುದರಿಂದ ಅವರನ್ನು ಸೇವೆಯಲ್ಲಿ ತೆಗೆದುಕೊಳ್ಳುವ ಸಲುವಾಗಿ ತೊಂದರೆಯಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಲಾಗಿದೆ.

ಆ) ಬಂದಿದೆ.

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ, ಜೇಷ್ಠತಾ ಪಟ್ಟಿಯು ಯಾದಿ ಹೊರಡಿಸಿದ ನಂತರ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಬೇಕಾದರೆ ಶೇಕಡಾ ೪೦ ಅಭ್ಯರ್ಥಿಗಳಿಗೆ ಸಂದರ್ಶನ ಇಲ್ಲದೇ ಮಾಡಬೇಕೆಂದು ಕ್ರಮ ಇದೆ. ಇದನ್ನು ತಾವು ಕಾರ್ಯಗತ ಮಾಡಿದ್ದೀರಾ?

ಶ್ರೀ ಎಸ್. ಕೆ. ಕಾಂತ.—ಅಧ್ಯಕ್ಷರೇ, ೧-೧-೮೮ರಲ್ಲಿ ರಾಜ್ಯದ ವಿವಿಧ ಇಲಾಖೆಯಲ್ಲಿ ಕೆಲಸ ಮಾಡತಕ್ಕವರ ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಿದ್ದೇವೆ. ಇದು ತಯಾರು ಆದನಂತರ ವಿವಿಧ ಇಲಾಖೆಗಳ ೬೨೨ ಜಾಗಗಳಿಗೆ ಅಭ್ಯರ್ಥಿಗಳ ಹೆಸರುಗಳನ್ನು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ ಇನ್ನೂ ೬ ಸಾವಿರ ಜನ ಇದ್ದಾರೆ. ಈಗ ೬೨೨ ಜನಕ್ಕೆ ಕೊಟ್ಟಿದ್ದೀರೆಂದರೆ, ಉಳಿಕ್ಕವರನ್ನು ತುಂಬಲು ಇನ್ನೂ ೧೦ ವರ್ಷಗಳು ಬೇಕಾಗುತ್ತದೆ.

ಶ್ರೀ ಎಸ್. ಕೆ. ಕಾಂತ.—''ಸಿ'' ಗ್ರೂಪ್‌ನಲ್ಲಿ ನಾವು ಭರ್ತಿ ಮಾಡಬೇಕಾಗುತ್ತದೆ. ಟೀಚರ್ಸ್ ಹಾಗೂ ಬೇರೆ ಬೇರೆ ಹುದ್ದೆಗಳು ಭರ್ತಿ ಆಗುತ್ತಿವೆ. ಹೀಗೆ ಎಲ್ಲಾ ಜಾಗಗಳು ಭರ್ತಿ ಆಗುತ್ತಾ ಹೋದಲ್ಲಿ ಇನ್ನು ಒಂದು ಅಥವಾ ಒಂದೂವರೆ ವರ್ಷದಲ್ಲಿ ಇರುವ ೬ ಸಾವಿರ ಜನರು ಏನಿದ್ದಾರೆ, ಇವರೆಲ್ಲಾ ಖಾಯಂ ಆಗಬಹುದು ಎನ್ನುವ ವಿಶ್ವಾಸ ನನಗೆ ಇದೆ.